ಕುಡಿಯುವ ನೀರಿನ ಘಟಕ

38(3421); ಶ್ರೀ ಮಂಜುನಾಥ ಗೌಡ ಕೆ.ಎಸ್. (ಮಾಲೂರು)

ಅ) ಕಳೆದ ಒಂದು ವರ್ಷದಿಂದ ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆಯೇ (ವಿಧಾನಸಭಾವಾರು ಗ್ರಾಮಗಳವಾರು ವಿವರ ನೀಡುವುದು)

ಆ) ಸದರಿ ಯೋಜನೆಗಾಗಿ ಕೋಲಾರ ಜಿಲ್ಲೆಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು;

ಇ) ಶುದ್ಧ ಕುಡಿಯುವ ನೀರಿನ ಘಟಕ ಯೋಜನೆಯ ರೂಪುರೇಷೆಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾ. ಅ. ಮತ್ತು ಪಂ. ರಾಜ್ ಸಚಿವರು)

ಅ) 2013–14ನೇ ಸಾಲಿನಲ್ಲಿ 1000 ನೀರು ಶುದ್ಧೀಕರಣ ಘಟಕಗಳ ಅಳವಡಿಕೆ ಪೈಕಿ ಕೋಲಾರ ಜಿಲ್ಲೆಗೆ 71 ನೀರು ಶುದ್ಧೀಕರಣ ಘಟಕ (WPP)ಗಳನ್ನು ಮಂಜೂರು ಮಾಡಿದ್ದು, ವಿವರಗಳು ಈ ಕೆಳಕಂಡಂತಿವೆ. (ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಕ್ರ. ಸಂ	ತಾಲ್ಲೂಕು	ಮಂಜೂರಾದ WPP ಸಂಖ್ಯೆ	ಸ್ಥಾಪಿಸಲಾದ WPP ಸಂಖ್ಯೆ
1	ಕೋಲಾರ	03	03
2	ಮಾಲೂರು	13	13
3	ಬಂಗಾರಪೇಟೆ	15	15
4	ಕೆ.ಜಿ.ಎಫ್.	07	07
5	ಮುಳಬಾಗಿಲು	11	10
6	ಶ್ರೀನಿವಾಸಪುರ	22	21
-	ಒಟ್ಟು	71	69

2014–15ನೇ ಸಾಲಿನ ಮೊದಲ ಹಂತದ 1000 ನೀರು ಶುದ್ಧೀಕರಣ ಘಟಕಗಳ ಅಳವಡಿಕೆ ಪೈಕಿ, ಕೋಲಾರ ಜಿಲ್ಲೆಗೆ **116** ನೀರು ಶುದ್ಧೀಕರಣ ಘಟಕ (WPP)ಗಳನ್ನು ಅಳವಡಿಸಲು ಜನವಸತಿಗಳ ಆಯ್ಕೆ ಮಾಡಿ **ದಿನಾಂಕ:30.01.2015ರಲ್ಲಿ** ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) 2013–14ನೇ ಸಾಲಿಗೆ **ರೂ.1230.43ಲಕ್ಷ** ಅನುದಾನವನ್ನು ಸದರಿ ಯೋಜನೆಗಾಗಿ ಕೋಲಾರ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಇ) 2014–15ನೇ ಸಾಲಿನಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸುವ ಯೋಜನೆಯ ರೂಪುರೇಷೆಗಳು ಈ ಕೆಳಕಂಡಂತಿವೆ:

1) ಆರ್ಸೆನಿಕ್, ಅಧಿಕ ಫ್ಲೋರೈಡ್ ಅಥವಾ ಒಂದಕ್ಕಿಂತ ಹೆಚ್ಚು ರಾಸಾಯನಿಕ ಕಲುಷಿತೆಯಿಂದ ಕೂಡಿರುವ ಅಥವಾ ಸಾಕಷ್ಟು ಪ್ರಮಾಣದಲ್ಲಿ ಪರ್ಯಾಯ ಸುರಕ್ಷಿತ ಕುಡಿಯುವ ನೀರಿನ ಜಲಮೂಲವಿರದ ಹಾಗೂ ಹಾನಿಕಾರಕ ಸೂಕ್ಷ್ಮಾಣು ಜೀವಿಗಳನ್ನು ಹೊಂದಿರುವ ಜಲಮೂಲಗಳ ಜನವಸತಿಗಳಲ್ಲಿ ಶುದ್ಧ ನೀರಿನ ಘಟಕಗಳನ್ನು ಅಳವಡಿಸುವುದು.

2) ಸ್ಥಳೀಯ ಜನಸಂಖ್ಯೆ ಆಧರಿಸಿ, ಅಗತ್ಯವಿರುವ 500LPH / 1000LPH / 2000LPH ಸಾಮರ್ಥ್ಯದ ತಜ್ಞರ ಶಿಫಾರಸ್ಸಿನಂತೆ ಸೂಕ್ತ ತಂತ್ರಜ್ಞಾನದ ಘಟಕಗಳನ್ನು ಅಳವಡಿಸುವುದು.

3) **2014–15ನೇ** ಸಾಲಿನಲ್ಲಿ ಪ್ರತಿ ಘಟಕದ ಒಟ್ಟು ವೆಚ್ಚದಲ್ಲಿ ಗರಿಷ್ಠ **ರೂ.5.00ಲಕ್ಷ** ಸಹಾಯಧನವನ್ನು ಸರ್ಕಾರ ನೀಡುವುದು. ಬಾಕಿ **ಶೇ50%ರಷ್ಟು** ವೆಚ್ಚವನ್ನು ಗ್ರಾಮ ಪಂಚಾಯಿತಿ, NGOs, ಸಹಕಾರ ಸಂಘ ನೀಡಬೇಕು.

4) ಘಟಕಗಳ **ಕನಿಷ್ಠ 5 ಅಥವಾ** 7 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿ ಸಲುವಾಗಿ ಸ್ಥಳೀಯ ಗ್ರಾಮ

ಪಂಚಾಯಿತಿ ಆಯಾಯ ಸಭಬರಾಜು ಸಂಸ್ಥೆಯೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕು.

5) ಬಳಕೆದಾರರ ಶುಲ್ಕ ಪ್ರತಿ ಲೀಟರ್‌ಗೆ 10 ಪೈಸೆ ದರವನ್ನು ಮೀರತಕ್ಕದ್ದಲ್ಲ. ಘಟಕದ ನಿರ್ವಹಣೆಯನ್ನು ಸಂಗ್ರಹವಾದ ಬಳಕೆದಾರರ ಶುಲ್ಕದಿಂದಲೇ ಮಾಡಿಕೊಳ್ಳಬೇಕು.

Karnataka Legislative Assembly

3421; Sri Manjunath Gowda K.S (Malur)

A) Whether drinking water plants established in Kolor for the past one year (Constituency wise and village wise details to be furnished);

B) What is the grant released to kolar district by the government for the above project;

C) What are the guidelines of pure drinking water plant scheme?

Sri H.K. Patil (Minister for Rural Development and Panchayat Raj)

A) 71 WPP have been sanctioned to Kolar district out of 1000 WPP programmed to be installed during 2013-14 and taluk wise details are as follows:

Sl. No	Taluk	No. of WPP sanctioned	No. of WPP established
1	Kolar	03	03
2	Malur	13	13
3	Bangarpet	15	15
4	KGF	07	07
5	Mulbagil	11	10
6	Srinivaspura	22	21
	Total	**71**	**69**